# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ: 29-10-2021

ಸಂಖ್ಯೆ: ಎಸಿ9/59/2021-22

## ಸುತ್ತೋಲೆ-I

ವಿಷಯ:- 2021-22ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗೆಗೆ.

ಉಲ್ಲೇಖ:- 1. ವಿ.ವಿ ಅಧಿಸೂಚನೆ ಸಮಸಂಖ್ಯೆ ದಿನಾಂಕ:23-08-2021
2. ವಿ.ವಿ ಅಂತಿಮ ಪರಿಷ್ಕೃತ ಅಧಿಸೂಚನೆ-1ರ ಸಂಖ್ಯೆ:ಎಸಿ7(ಎ)/456/ 2016-17. ದಿನಾಂಕ:13-10-2021.
3. ವಿ.ವಿ ಸುತ್ತೋಲೆ ಸಂಖ್ಯೆ:ಎಸಿ9/107/2017-18, ದಿನಾಂಕ:18-10-2021.
4. ವಿವಿಧ ಕಾಲೇಜುಗಳ ಪ್ರಾಂಶುಪಾಲರುಗಳ ಮನವಿ.

*****

2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ದಂಡ ಶುಲ್ಕ ರೂ.500/-ದೊಂದಿಗೆ ದಿನಾಂಕ:30-10-2021ರವರೆಗೆ ವಿಸ್ತರಿಸಲಾಗಿರುವುದನ್ನು ಉಲ್ಲೇಖಿತ (4)ರಲ್ಲಿನ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ವಿವಿಧ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳ ಮನವಿ ಮೇರೆಗೆ ರೂ.500/-ಗಳ ದಂಡ ಶುಲ್ಕದೊಂದಿಗೆ ಪ್ರವೇಶಾತಿ ದಿನಾಂಕವನ್ನು ದಿನಾಂಕ:20-11-2021 ರವರೆಗೆ ಮತ್ತೊಮ್ಮೆ ವಿಸ್ತರಿಸಲಾಗಿದೆ.

ಮೇಲೆ ತಿಳಿಸಿರುವ ದಿನಾಂಕದೊಳಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಏನಾದರೂ ಹಾಜರಾತಿ ಕೊರತೆಯಾದಲ್ಲಿ/ಅಗತ್ಯವಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಂಡು ಹಾಜರಾತಿ ಸರಿದೂಗಿಸುವುದು.

29/10/2021
ಕುಲಸಚಿವ
ಕುಲಸಚಿವ,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಇವರಿಗೆ:-

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಘಟಕ/ಸ್ವಾಯತ್ತ ಹಾಗೂ ಸಂಯೋಜಿತ ಪದವಿ ಕಾಲೇಜುಗಳ **ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.**
2. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- **ಮಾಹಿತಿಗಾಗಿ**
3. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ/ವಾಣಿಜ್ಯ/ಕಲಾ ಮತ್ತು ಕಾನೂನು ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.